ವಿರೋಧವನ್ನು ವ್ಯಕ್ತಪಡಿಸುತಿದ್ರು. ಕೆಲವು ಹೆಂಗಸರು ಒಂದು ಕಡೆ ತಲೆಮೇಲೆ ಸೆರಗು ಹಾಕ್ಕೊಂಡು ಇದಕ್ಕೆಲ್ಲ ಆ ಸುನಂದಾನೇ ಕಾರಣ; ಅವಳಂಥವರು ಊರಿನಲ್ಲಿದ್ರೆ ಯಾವ ಗಂಡಸರ ನಿಯತ್ತು ನೆಟ್ಟಗಿರಲ್ಲ, ಯಾವ ಗರತಿರ ಸಂಸಾರನೂ ಉಳಿಯಲ್ಲ ಅಂತ ತೋಚಿದಂತೆ ಮಾತಾಡ್ತಿದ್ರು. ಆದರೆ ಶಾರದಮ್ಮ ಗಂಡನ ಆರೋಪಕ್ಕೆ ನೊಂದು ಕೋರ್ಟ್‌ನಿಂದ ಮನೆಗೆ ಬಂದ ತಕ್ಷಣ ಒಂದು ಕ್ಷಣವೂ ತಡಮಾಡದೆ ನೇಣು ಹಾಕಿಕೊಂಡು ಜೀವ ಬಿಟ್ಟಿದ್ದು ಮಾತ್ರ ಪರಮ ಅನ್ಯಾಯ ಅಂತ ಊರಿನ ಜನವೆಲ್ಲ ಶಾರದಮ್ಮನ ಸಾವಿಗೆ ಮರುಗ್ತಾ, ಇಂಥ ಗರತಿ ಸಾವಿಗೆ ಕಾರಣವಾದ ಅವಳ ಗಂಡ ತಿಮ್ಮೋಟಯ್ಯನಿಗೆ ಹಾಗೂ ಅವನನ್ನು ಮರುಳುಮಾಡಿದ ಸುನಂದಾಗೆ ಶಾಪ ಹಾಕ್ತಾ ಗುಂಡಿಗೆ ಮೂರು ಹಿಡಿ ಮಣ್ಣು ಹಾಕಲು ಕಾಯ್ತಿದ್ರು. ಊರಿಗೇ ಹಿರಿಯಳಾದ ಕಣ್ಣು ಕಿವಿ ಒಂದೂ ಸರಿಯಾಗಿ ಕೆಲಸ ಮಾಡದ ತೊಂಬತ್ತಾರು ವರ್ಷ ವಯಸ್ಸಿನ ಸೇನಮ್ಮ ನಮ್ಮ ಶಾರದಾ ಮುತ್ತೈದೆ ಸಾವು ಸತ್ತವಳೇ ಕನರಪ್ಪ, ಪಾಪಿಷ್ಟ ಅವಳ ಗಂಡ ಬರೋಗಂಟ ಮಣ್ಣು ಮಾಡಬೇಡಿ ಅಂತ ರಾಗ ತೆಗೀತಿದ್ಲು. ಅದಕ್ ಯಾರೋ ಅವನೆಂಗೆ ಇಲ್ಲಿಗೇ ಬತ್ತಾನೆ, ಬರೋ ಮಖ ಐತ, ಬಂದರೆ ಜನ ಬಿಟ್ಟಾರ, ಅವನನ್ನೂ ಹೊಡೆದು ಇದೇ ಗುಂಡಿಗೆ ಹಾಕಿ ಮಣ್ಣುಮಾಡಲ್ವ, ಅವನಿಗೇನು ಕಾಯಬೇಡಿ ಮುಂದಿನ ಕಾರ್ಯ ನೋಡಿ ಅಂತಂದ್ರು. ಅದೂ ಸರೀನೆ ಅಂತೇಳಿ ಮುಂದಿನ ಕಾರ್ಯಮಾಡ್ತಿದ್ರು. ಶಾರದಮ್ಮನಿಗೆ ಗಂಡು ಮಕ್ಳು ಇಲ್ಲದೇ ಇದ್ದದ್ದರಿಂದ ಅಳಿಯ ಪ್ರಕಾಶನೆ ಮುಂದೆ ನಿಂತು ಎಲ್ಲಾ ಕಾರ್ಯ ಮಾಡ್ತಿದ್ದ. ಗುಂಡಿ ತಾವ ಮಾಡಬೇಕಾದ ಕಾರ್ಯ ಎಲ್ಲಾಮಾಡಿ ಹೆಣಾನ ಗುಂಡಿಗೆ ಇಳಿಸಿದ್ರು, ಅಷ್ಟೇ. ಅದೆಲ್ಲಿದ್ದನೋ, ಅದ್ಯಾವ ಮಾಯದಲ್ಲಿ ಬಂದನೋ, ಒಂದು ಬಾಡಿಗೆ ಕಾರಲ್ಲಿ ತಿಮ್ಮೋಟಯ್ಯ ಭರ್ ಅಂತ ಅಲ್ಲಿಗೆ ಬಂದ ಬಂದವನೇ, ಊರಬ್ಬದಲ್ಲಿ ಕೋಣ ಕಡಿಯೋ ಮಚ್ಚು ಹಿಡಿದು, ಆ ಲೌಡಿಮಗ ಪ್ರಕಾಶ ಎಲ್ಲವನೆ ಇವತ್ತು ಅವನನ್ನ ಕಡಿದು ತುಂಡುತುಂಡು ಮಾಡಿ ಈ ಗುಂಡಿಗೇ ತುಂಬುತೀನಿ, ಅವನಿಂದಲೇ ನನ್ನ ಸಂಸಾರ ಹಾಳಾಯ್ತು ಅಂತ ರಭಸದಿಂದ ನುಗ್ಗಿದ. ಅವನು ನುಗ್ಗಿದ ರಭಸಕ್ಕೆ, ಆವೇಶಕ್ಕೆ ಬೆಚ್ಚಿದ ಜನ ನಮ್ಮ ಕಡೆಯೂ ಮಚ್ಚು ಬೀಸಿದ್ರೆ ಏನು ಗತಿ ಅಂತ ಚೆಲ್ಲಾ ಪಿಲ್ಲಿಯಾಗಿ ಓಡಿದ್ರು. ಪ್ರಕಾಶನಂತೂ ಮಾವನ ಕೈಗೆ ಸಿಕ್ಕಿದ್ರೆ ಇವತ್ತು ನನ್ನ ಸಾವು ಗ್ಯಾರಂಟಿ ಅಂತ ಅರಿತುಕೊಂಡು, ಬಿಚ್ಚಿಹೋದ ಪಂಚೆಯನ್ನು ಲೆಕ್ಕಿಸದೇ ಅಲ್ಲಿಂದ ಓಡಿಹೋದ. ಜನವೆಲ್ಲಾ ದೂರವೇ ನಿಂತು ತಿಮ್ಮೋಟಯ್ಯನ ನೋಡ್ತಿದ್ರು, ಅವನು ಗುಂಡಿ ಇಳಿದು, ಗುಂಡಿಯಲ್ಲಿದ್ದ ಹೆಣವನ್ನ ಹೊರಗೆ ಹಾಕಿ, ತಾನು ಬಂದಿದ್ದ ಕಾರಿನಲ್ಲಿ ಹಾಕಿಕೊಂಡು ಭರ್ ಅಂತ ಅಲ್ಲಿಂದ ಹೊರಟೋದ. ಅಲ್ಲಿದ್ದ ಜನವೆಲ್ಲ ಮತ್ತೆ ಗುಂಪುಸೇರಿ ತಮ್ಮ ಕಣ್ಣಮುಂದೆ ನಡೆದದ್ದನ್ನ ನಂಬಬೇಕೋ ಬೇಡವೋ ತಿಳಿಯದೆ ದಿಗ್ಮೂಢರಾದರು. ಸೇನಮ್ಮಜ್ಜಿ ಹೆಣ ಹೊಳಕ್ಕೆ ತೆಗೆದ ಗುಂಡಿ ಹಂಗೇ ಬಿಡಬಾರದು ಒಂದು ಕೋಳಿನಾದ್ರು ಹಾಕಿ ಮುಚ್ಚರಪ್ಪ ಅಂದ್ಲು. ಯಾರೋ ಕೋಳಿ ತರಲು ಊರಕಡೆ ಓಡಿದ್ರು.


## ಅನಂತ ಶಾಂದ್ರೇಯ

ಅನಂತ ಶಾಂದ್ರೇಯ ಕಾವ್ಯನಾಮದಿಂದ ಬರೆಯುವ ಅನಂತ ಎಂ. ಅವರು ರಂಗಭೂಮಿ, ಸಿನಿಮಾ, ಕಿರುತೆರೆಯಲ್ಲಿ ಸಕ್ರಿಯರು; ಹಲವಾರು ಧಾರಾವಾಹಿ, ಸಿನಿಮಾಗಳಿಗೆ ಕಥೆ ಚಿತ್ರಕಥೆ ಸಂಭಾಷಣೆ ಬರೆದಿದ್ದಾರೆ; ಹಲವಾರು ನಾಟಕಗಳನ್ನು ರಚಿಸಿದ್ದಾರೆ. ಇವರ ಕಾದಂಬರಿ ಆಧರಿಸಿ ನಿರ್ಮಾಣವಾದ 'ಕೌದಿ' ಸಿನಿಮಾ ರಾಜ್ಯ ಪ್ರಶಸ್ತಿ ಗಳಿಸಿದೆ.